SRI DEVARAJ URS ACADEMY OF HIGHER EDUCATION & RESEARCH
SRI DEVARAJ URS MEDICAL COLLEGE
Tamaka, Kolar
UNIVERSITY LIBRARY & LEARNING RESOURCE CENTRE
SDUAHER

Online Newspaper Clipping Service
Dtd- Monday, 21st , October- 2019
Page No.10B

ವಿಜಯವಾಣಿ

ರಾಮಯ್ಯ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಸುಂದರೇಶ್ ಅಭಿಪ್ರಾಯ | ಬೆಳ್ಳಿಹಬ್ಬ ಕಾರ್ಯಕ್ರಮ

# ವೈದ್ಯಕೀಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ ಅತ್ಯಗತ್ಯ

■ ವಿಜಯವಾಣಿ ಸುದ್ದಿಜಾಲ ಕೋಲಾರ

ವೈದ್ಯಕೀಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ ಅತ್ಯಗತ್ಯವಾಗಿದ್ದು, ವಿದ್ಯಾರ್ಥಿಗಳು ಸಂಶೋಧನಾ ಸಾಹಿತ್ಯದ ವಿಮರ್ಶೆಯೊಂದಿಗೆ ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಚಿಕಿತ್ಸೆ ನೀಡುವ ಕುರಿತು ಚಿಂತನೆ ನಡೆಸಬೇಕು ಎಂದು ರಾಮಯ್ಯ ವಿವಿ ಉಪಕುಲಪತಿ ಡಾ.ಡಿ.ಸಿ.ಸುಂದರೇಶ್ ಹೇಳಿದರು.

ಟಮಕದಲ್ಲಿ ಶ್ರೀ ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಜಾಲಪ್ಪ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಬೆಳ್ಳಿಹಬ್ಬ ಕಾರ್ಯಕ್ರಮದಲ್ಲಿ ಮಾತನಾಡಿ, ವ್ಯವಸ್ಥೆಯ ಸುಧಾರಣೆಗೆ ಚಿಂತನೆ ಅಗತ್ಯವಾಗಿದ್ದು, ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಿ ನಂಬಿಕೆ ಬೆಳೆಸಿಕೊಳ್ಳಬೇಕು ಎಂದರು.

ಆರೋಗ್ಯ ಸೇವೆ ನಿರ್ವಹಣೆಯಲ್ಲಿ ಟೆಲಿಮೆಡಿಸಿನ್ ಅತಿಮುಖ್ಯ. ರೋಗಿಗೆ ನೀಡುವ ಚಿಕಿತ್ಸೆ ಗುಣಮಟ್ಟದಲ್ಲಿ ರಾಜಿ ಬೇಡ. ವೈದ್ಯಕೀಯ ಕ್ಷೇತ್ರದ ಆಧುನಿಕ ಸೌಲಭ್ಯಗಳನ್ನು ಜನತೆಗೆ ತಲುಪಿಸಬೇಕು ಎಂದು ಕಿವಿಮಾತು ಹೇಳಿದರು.

ಶಾಸಕ ಕೆ.ಶ್ರೀನಿವಾಸಗೌಡ ಮಾತನಾಡಿ, ಜಿಲ್ಲೆಯಲ್ಲಿ ಉತ್ತಮ ಶಿಕ್ಷಣ ಸಂಸ್ಥೆ ಹಾಗೂ ಸಾವಿರಾರು ರೋಗಿಗಳ ಚಿಕಿತ್ಸೆಗೆ ಸುಸಜ್ಜಿತ ಆಸ್ಪತ್ರೆ ನೀಡಿದ ಜಾಲಪ್ಪ ಅವರ ಕಾರ್ಯ ಶ್ಲಾಘನೀಯ ಎಂದರು.


ವಿಜಯವಾಣಿ ಚಿತ್ರ

ಕೋಲಾರದ ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಜಾಲಪ್ಪ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಬೆಳ್ಳಿ ಹಬ್ಬ ಕಾರ್ಯಕ್ರಮದಲ್ಲಿ ಸಂಸ್ಥೆ ಅಧ್ಯಕ್ಷ, ಮಾಜಿ ಸಂಸದ ಆರ್.ಎಲ್.ಜಾಲಪ್ಪ ಸಸಿಗೆ ನೀರೆರೆದು ಕಾರ್ಯಕ್ರಮ ಉದ್ಘಾಟಿಸಿದರು. ರಾಮಯ್ಯ ವಿವಿ ಉಪಕುಲಪತಿ ಡಾ.ಡಿ.ಸಿ.ಸುಂದರೇಶ್ ಇತರರಿದ್ದರು.

ಜಾಲಪ್ಪ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ವಿ.ಲಕ್ಷ್ಮಯ್ಯ ಆಸ್ಪತ್ರೆಯ ವರದಿ ಮಂಡಿಸುತ್ತಾ, ಕಳೆದ ವರ್ಷ ಜಾಲಪ್ಪ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದಿಂದ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ 365 ದಿನದಲ್ಲಿ 425 ಉಚಿತ ವೈದ್ಯಕೀಯ ಶಿಬಿರ ನಡೆಸಲಾಗಿದೆ. 1.67 ಲಕ್ಷಕ್ಕೂ ಹೆಚ್ಚು ಮಂದಿ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಸರ್ಕಾರ ವಿವಿಧ ಆರೋಗ್ಯ ಸೇವೆಗಳ ಜತೆಗೆ ವಿವಿಧ ವಿಮಾ ಕಂಪನಿಗಳ ಆರೋಗ್ಯ ಸೇವೆಗಳು ಜಾಲಪ್ಪ ಆಸ್ಪತ್ರೆಯಲ್ಲಿ ಲಭ್ಯವಿದೆ ಎಂದರು. ಶ್ರೀದೇವರಾಜ ಅರಸು ಮಹಾವಿದ್ಯಾಲಯ ಕುಲಪತಿ ಡಾ.ಎಸ್.ಕುಮಾರ್ ಮಾತನಾಡಿ, ಮುಂದಿನ ಆಸ್ಪತ್ರೆ ದಿನ, ಜಾಲಪ್ಪ ಹುಟ್ಟುಹಬ್ಬದ ವೇಳೆ ಆಸ್ಪತ್ರೆಯಲ್ಲಿ ಕ್ಯಾನ್ಸರ್ ರೋಗಿಗಳಿಗೆ ಗ್ರಂಥಿ ಸಂಸ್ಥೆ ಸ್ಥಾಪಿಸುವ ಉದ್ದೇಶವಿದೆ ಎಂದರು. ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದಲ್ಲಿ ಉತ್ತಮ ಕಾರ್ಯ ನಿರ್ವಹಿಸಿದ ಶುಶ್ರೂಷಕಿಯರು, ಸಿಬ್ಬಂದಿ, ಕಂಪ್ಯೂಟರ್ ಆಪರೇಟರ್, ಅಕೌಂಟೆಂಟ್, ಟೆಕ್ನಿಷಿಯನ್, ಫಾರ್ಮಾಸಿಸ್ಟ್ ಸೇರಿ ವಿವಿಧ ವಿಭಾಗಗಳ ನೌಕರರಿಗೆ ಪ್ರಶಸ್ತಿ, ಸಂಸ್ಥಾಪಕ ಉಪಕುಲಪತಿ ಡಾ.ಚಂದ್ರಶೇಖರಶೆಟ್ಟಿ, ಸಂಸ್ಥಾಪಕ ವೈದ್ಯಕೀಯ ಅಧೀಕ್ಷಕ ಡಾ.ಬೋರಪ್ಪ ಮತ್ತಿತರರನ್ನು ಸನ್ಮಾನಿಸಲಾಯಿತು.

ಶಿಕ್ಷಣ ಸಂಸ್ಥೆ ಸ್ಥಾಪಕ, ಮಾಜಿ ಸಂಸದ ಆರ್.ಎಲ್. ಜಾಲಪ್ಪ, ಮಾಜಿ ಶಾಸಕ ನರಸಿಂಹಸ್ವಾಮಿ, ಉಪಾಧ್ಯಕ್ಷ ರಾಜೇಶ್‌ಜಗದಾಳೆ, ನಿರ್ದೇಶಕ ಜಿ.ರಾಜೇಂದ್ರ, ಪ್ರೊ. ಚಾನ್ಸಲರ್ ಎ.ವಿ.ಮೊಹಿದ್ದೀನ್ ಕುಟ್ಟಿ, ಏರ್‌ಮಾರ್ಷಲ್ ಡಾ.ಸಿ.ಕೆ.ರಂಜನ್, ವೈಸ್ ಚಾನ್ಸಲರ್ ಡಾ.ಪ್ರದೀಪ್ ಕುಮಾರ್, ಕುಲಸಚಿವ ಡಾ.ಕೆ.ಎನ್.ವಿ.ಪ್ರಸಾದ್, ಟ್ರಸ್ಟಿಗಳಾದ ಹನುಮಂತರಾಜು, ಉದಯ್, ಅರವಿಂದ್, ಸರಸ್ವತಿ, ಮೃಣಾಲಿನಿ ಮತ್ತಿತರರು ಇದ್ದರು.